doe-517
T.P-2

Reg No B G 155 26 — 7 —72

55th Year of Publication ‘Satyavadi’ daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಮಹೋನ್ನತ
ಪರಮೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹಿಂದೂ ದೇವಾಲಯದ ಬಗ್ಗೆ ಮದ್ರಾಸ್ ಕೋರ್ಟ್ ತೀರ್ಪು

ಸಿಮ್ಲಾ ಒಪ್ಪಂದದ ಚರ್ಚೆ

ನವದೆಹಲಿ — ಪಾರ್ಲಿಮೆಂಟಿನ ಳಳಿಗಾಲದ ಅಧಿವೇಶನದಲ್ಲಿ ತಾ॥ 31 ರಂದು ಸಿಮ್ಲಾ ಒಪ್ಪಂದವು ಚರ್ಚಿಸಲಾಗುವುದೆನ್ನಲಾಗಿದೆ.

★

ವಜ್ರಗಳ ರಫ್ತು

ಬೊಂಬಾಯಿ — ಪ್ರಸ್ತುತ ವರ್ಷದ ಏಪ್ರಿಲ್–ಮೇ ಈ ಎರಡು ತಿಂಗಳಲ್ಲಿ ಭಾರತವು ರೂ 8 09 ಕೋಟಿ ಬೆಲೆಯ ಕತ್ತರಿಸಿದ ಮತ್ತು ಸಾಣೆಹಿಡಿದ ವಜ್ರಗಳನ್ನು ರಫ್ತು ಮಾಡಿದೆ.

★

ಹೆಂಡದ ಮಾರಾಟ

ಹೈದರಾಬಾದು— ಮುಂದಿನ ವರ್ಷದಿಂದ ಹೆಂಡ ಮಾರುವುದನ್ನು ಎಲ್ಲೆಲ್ಲಿ ಹೆಂಡ ಇಳಿಸುವವರ ಸಹಕಾರ ಸಂಘ ಇರುವುದೋ ಅಲ್ಲಲ್ಲೆಲ್ಲಾ ಆ ಸಂಘಗಳಿಗೆ ಕೊಡಲಾಗುವುದೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

○

ಶ್ರೀಮನ್ಮಹಾರಾಜರು

ಮೈಸೂರು— ಕೆಲವು ದಿನಗಳಿಂದ ತೀವ್ರ ಅಸ್ವಸ್ಥರಾಗಿದ್ದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರ ದೇಹಸ್ಥಿತಿ ಸುಧಾರಿಸುತ್ತಿದೆಯೆಂದು ಗೊತ್ತಾಗಿದೆ

★

ಶ್ರೀಮನ್ಮಹಾರಾಣಿಯವರು

ಮೈಸೂರು— ಹಿರಿಯ ಮಹಾರಾಣಿ ಸತ್ಯಪ್ರೇಮಕುಮಾರಿದೇವಿಯವರು ತಾ 29 ರಂದು ನಂಜನಗೂಡಿಗೆ ಭೇಟಿ ಕೊಟ್ಟು ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಲಿರುವರು.

ಆಹಾರ ಸಚಿವಾಲಯದ ಚಿಂತೆ

ನವದೆಹಲಿ— ಕಳೆದ 2 ವಾರಗಳಿಂದ ದೇಶದಲ್ಲಿ ಮಳೆ ಇಲ್ಲದಿರುವುದು, ತನ್ಮೂಲಕ ಬೆಳೆಗೆ ನಷ್ಟವಾಗುವ ಶಂಕೆಯು ಆಹಾರ ಸಚಿವಾಲಯಕ್ಕೆ ಚಿಂತೆ ಹತ್ತಿದೆ.

★

ಫೇಲಾದ ವಿದ್ಯಾರ್ಥಿಗಳ ಚಳವಳಿ

ಹಾಸನ— ಸ್ಥಳೀಯ ಕಾಲೇಜಿನ ಫೇಲಾದ ಪಿಯು ಸಿ ವಿದ್ಯಾರ್ಥಿಗಳು ಪಿಯು ಸಿ ನಲ್ಲಿ ಕ್ಯಾರಿ ಓವರ್ ಪದ್ಧತಿ ಜಾರಿಗೆ ತರಲು ಒತ್ತಾಯ ಪಡಿಸುವುದಕ್ಕಾಗಿ ಪಟ್ಟಣದಲ್ಲಿ ಮೆರವಣಿಗೆ ನಡೆಸಿದರು.

●

ಹಿಂದೂ ದೇವಾಲಯಗಳು

ಮದರಾಸು— ತಮಿಳು ನಾಡುವಿನಲ್ಲಿ ಹಿಂದೂದೇವಾಲಯಗಳಿಗೆ ಹಿಂದುವೇತರರ ಪ್ರವೇಶಕ್ಕೆ ಅವಕಾಶ ಕೊಟ್ಟಿರುವ ದೇವಾಲಯ ಪ್ರವೇಶ ಶಾಸನದ 4–ಎ ವಿಧಿಯನ್ನು ಹೈ ಕೋರ್ಟು ಹೊಡೆದು ಹಾಕಿದೆ.

●

ಸರಕಾರದ ಜಾಮೀನು

ಹುಬ್ಬಳ್ಳಿ — ಹುಬ್ಬಳ್ಳಿ–ಧಾರವಾಡ ದ್ವಿನಗರಗಳಿಗೆ ಮಲಪ್ರಭಾ ನೀರು ಸರಬರಾಜು ಸ್ಕೀಂಗೆ ಜೀವ ವಿಮಾ ಸಂಸ್ಥೆಯಿಂದ ಪಡೆಯುವ ರೂ 1 9 ಕೋಟಿ ರೂ.ಗಳಿಗೆ ಮೈಸೂರು ಸರಕಾರ ಜಾಮೀನಾಗಲು ಒಪ್ಪಿದೆ.

★

ಸಿಂಧುದೇಶ್ ಹುಟ್ಟುವುದೇ ?

ಕರಾಚಿ— ಸಿಂಧ್‌ನ ಖದೀಮ ನಾಯಕ ಶ್ರೀ ಜಿ ಎಂ ಸಯದ್, ತಾನು ಬಂಗ್ಲಾದೇಶದ ಮಾದರಿಯಲ್ಲಿ ಚಳುವಳಿ ಹೂಡುವುದಾಗಿಯೂ, ಅದರಿಂದ ಪಾಕಿಸ್ತಾನದಲ್ಲಿನ ತಮ್ಮ ಜನರ ಸೂರೆಯಾಗದ ಅಥವಾ ಅಥವಾ ಸಿಂಧ್‌ದೇಶ ಹುಟ್ಟುವದಾಗುವುದೆಂದೂ ಹೇಳಿದರು.

ಜೈ ಕರ್ನಾಟಕ

ಬೆಂಗಳೂರು— ಮುಖ್ಯ ಮಂತ್ರಿಗಳು ಶ್ರೀ ದೇವರಾಜ ಅರಸ್‌ರವರು ಶಾಸನ ಸಭೆಯಲ್ಲಿ ಮೈಸೂರು ರಾಜ್ಯದ ಹೆಸರನ್ನು ಕರ್ನಾಟಕ ಎಂದು ಬದಲಾಯಿಸುವ ಅಧಿಕೃತ ಠರಾವನ್ನು ಮಂಡಿಸಿದಾಗ ಸಭೆಯ ಹರ್ಷ ತುಂಬಿ ತುಳುಕಿತು — ಸದಸ್ಯರು ಪ್ರಶಂಸನೀಯ ಭಾಷಣಗಳನ್ನು ಮಾಡಿದರು.

ಸಿಹಿ ಹಂಚಿಕೆ

ಬೆಂಗಳೂರು— ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡುವ ನಿರ್ಣಯ ಮಂಡಿಸಿದರ ಸಂತೋಷಾರ್ಥವಾಗಿ ನಿನ್ನೆ ಶಾಸನ ಸಭೆಯಲ್ಲಿ ರಿಪಬ್ಲಿಕ್ ಪಕ್ಷದ ಶ್ರೀ ಸಿ. ಎಂ. ಆರ್ಮುಗಂ ಪೆಪರ್ ಮೆಂಟು ಹಂಚಿಡರು

★

ಸೇಫ್ಟಿ ಬೆಲ್ಟ್

ಪಶ್ಚಿಮ ಜರ್ಮನಿಯಲ್ಲಿ ಎಲ್ಲಾ ಮೋಟಾರು ವಾಹನಗಳಿಗೂ ಸೇಫ್ಟಿ ಬೆಲ್ಟ್ ಖಡ್ಡಾಯ ಮಾಡಲಾಗುವುದೆಂದು ಸಾರಿಗೆ ಮಂತ್ರಿಯವರು ಹೇಳಿದರು

●

ಖಡ್ಡಾಯ ನೇತ್ರ ಪರೀಕ್ಷೆ

ಪಶ್ಚಿಮ ಜರ್ಮನಿಯಲ್ಲಿ 60 ವರ್ಷದ ಮೋಟಾರು ನಡೆಸುವವರಿಗೆ ಖಡ್ಡಾಯ ನೇತ್ರ ಪರೀಕ್ಷೆಯನ್ನು ಆರೋಗ್ಯ ಇಲಾಖೆ ನೇಮಿಸಿದ್ದ ಆಯೋಗವು ಶಿಫಾರಸು ಮಾಡಿದೆ.

●

ದಿವ್ಯವಾಣಿ

ಸಜ್ಜನರ ಸಹವಾಸದಿಂದ ಯಾರಿಗೆ ತಾನೇ ಲಾಭವಾಗದು ? ಕಮಲದ ಎಲೆಗಳ ಮೇಲಿನ ನೀರಿನ ಹನಿಗಳೂ ಮುತ್ತುಗಳಂತೆ ಶೋಭಿಸುತ್ತವೆ. — ಸುಭಾಷಿತ

ಕೇರಳ ಬಗ್ಗೆ ಪ್ರಧಾನಿಗಳಿಗೆ ಕಳವಳ

ಕೊಚ್ಚಿ— ಕೇರಳದಲ್ಲಿಯ ಗಲಾಟೆಗಳ ಬಗ್ಗೆ ಪ್ರಧಾನಿ ಇಂದಿರಾರವರು ಕಳವಳಗೊಂಡಿದ್ದು, ಇದರಿಂದ ಸಮ್ಮಿಶ್ರ ಮಂತ್ರಿಮಂಡಲಕ್ಕೆ ಧಕ್ಕೆ ಬರಬಹುದೆಂದು ಶಂಕಿಸಿ ಕೇರಳ ಪ್ರದೇಶ ಕಾಂಗ್ರೆಸ್ ಮತ್ತು ಯುವಕ ಕಾಂಗ್ರೆಸ್ ನಾಯಕರನ್ನು ಹೈದರಾಬಾದಿನಲ್ಲಿ ಮಾತುಕತೆಗೆ ಕರೆದಿದ್ದಾರೆ.

ಶಾಂತಿಶ್ಯಾಂತಿಶ್ಯಾಂತಿಃ

ನವದೆಹಲಿ— ಯಾವ ದೇಶದ ಆರ್ಥಿಕ ಅಭ್ಯುದಯಕ್ಕೆ ಶಾಂತತೆ ಅವಶ್ಯಕವೆಂದೂ ಅದಕ್ಕಾಗಿಯೇ ಡಿಸೆಂಬರು ಯುದ್ದದಲ್ಲಿ ಆಕ್ರಮಿಸಲ್ಪಟ್ಟ ಪಾಕಿಸ್ತಾನದ ಪ್ರದೇಶವನ್ನು ವಾಪಸ್ಸು ಮಾಡಲು ಭಾರತ ಒಪ್ಪಿತೆಂದೂ, ಉಪಾಧ್ಯಾಯರು, ಲಾಯರುಗಳು ಮತ್ತು ಜೀವತದ ನಡೆಯ ವಿವಿಧ ಜನರಿದ್ದ ಸಭೆಯಲ್ಲಿ ಪ್ರಧಾನಿ ಇಂದಿರಾರವರು ಮಾಡಿದ ಭಾಷಣದಲ್ಲಿ ಹೇಳಿದರು.

●

ಕಾಶ್ಮೀರದ ವಿಷಯ !

ನವದೆಹಲಿ— ಕಾಶ್ಮೀರದ್ದು ಅಂತರ್ರಾಷ್ಟ್ರೀಯ ಸಮಸ್ಯೆಯೆಂದೂ. ಸೂಕ್ತ ಅಧೀಶತ್ವ ಮೂಲಕ ವ್ಯವಸ್ಥೆಗೊಳ್ಳಬೇಕೆಂದೂ ಪಾಕಿಸ್ತಾನ ಅಧ್ಯಕ್ಷ ಭೂಟೋ ಸುಕ್ಕೂರಿನಲ್ಲಿ ಜನತಾ ಸಭೆಯಲ್ಲಿ ಹೇಳಿದರು.

★

ತಪ್ಪಾದ ಪ್ರಕಟಣೆಗೆ ತೀವ್ರ ಕ್ರಮ

ಬೆಂಗಳೂರು— ಕಾಶ್ಮೀರವು ಒಂದು ನೆರೆ ರಾಷ್ಟ್ರವೆಂದು ಪ್ರಕಟಿಸಿರುವ ಔಟ್‌ಲೈನ್ ಮ್ಯಾಪ್ ಡ್ರಾಯಿಂಗ್ ಬುಕ್‌ಗಳ ಪ್ರಕಟಣೆಗಾರರ ಮೇಲೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ವಿದ್ಯಾಮಂತ್ರಿ ಶ್ರೀ ಬದ್ರಿನಾರಾಯಣ್ ರವರು ವಿಧಾನ ಪರಿಷತ್ತಿನಲ್ಲಿ ಹೇಳಿದರು.

★

ಸರಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ

ಸಂತಾನಹರಣ ಚಿಕಿತ್ಸಾನಂತರ ಅನಾರೋಗ್ಯ ಹೊಂದಿದವರಿಗೆ, ಅವರ ವರ ಮಾನ ಎಷ್ಟೇ ಇದ್ದರೂ ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಆಸ್ಪತ್ರೆಗಳು, ಆರೋಗ್ಯ ಸಂಸ್ಥೆಗಳು, ಇತ್ಯಾದಿಗಳಲ್ಲಿ ಉಚಿತ ಚಿಕಿತ್ಸೆಗಳನ್ನು ನೀಡಲ್ಲು ರಾಜ್ಯ ಸರ್ಕಾರ ನಿರ್ಧರಿಸಿದೆ.

★

ಕಳ್ಳ ಪೂಜಾರಿ

ಹುಬ್ಬಳ್ಳಿ— ಇಂಗ್ಲೇಶ್ವರದಗುಹೆಯಲ್ಲಿನ ಶ್ರೀ ರೇವಣಸಿದ್ದೇಶ್ವರಸ್ವಾಮಿಯ ವಿಗ್ರಹವನ್ನು ಕೆಡಿಸಿ, ದೇವಸ್ಥಾನದ ಆಭರಣ ಮತ್ತಿತರ ವಸ್ತುಗಳನ್ನು ಕದ್ದಿದ್ದ ಅಲ್ಲಿಯ ಪೂಜಾರಿಯನ್ನು ಪೋಲೀಸರು ದಸ್ತಗಿರಿ ಮಾಡಿ, ಅವನು ಕದ್ದಿದ್ದ ವಸ್ತುಗಳನ್ನು ವಶಪಡಿಸಿಕೊಂಡಿರುವರು : ವಿಗ್ರಹದಲ್ಲಿಡಲಾಗಿದೆಯೆಂದು ಹೇಳಲಾಗಿದ್ದ ಚಿನ್ನವನ್ನು ಅಪಹರಿಸುವ ಆಶೆಯಿಂದ ಅವನು ವಿಗ್ರಹವನ್ನು ವಿರೂಪಗಳಿಸಿದುದು.

★

ಬಾಂಬುಗಳ ಯುದ್ಧದಲ್ಲಿ ನಾಯಿಗಳು

ಬಾಂಬುಗಳ ಯುದ್ಧವನ್ನು ಎದುರಿಸಲು ಅಮೇರಿಕಾದಲ್ಲಿ ಸಹಸ್ರಗಟ್ಟಲೆ ನಾಯಿಗಳು, ಸೈನ್ಯದ ಶಿಬಿರಗಳಲ್ಲಿ, ವಿಶೇಷ ಪಾಠಶಾಲೆಗಳಲ್ಲಿ, ರಸಾಯನಿಕ ಪ್ರಯೋಗಶಾಲೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ತರಬೇತು ಪಡೆಯುತ್ತಿವೆ — ವಾಸನೆಯಿಂದ ಅಣುಬಾಂಬುಗಳನ್ನೂ, ಸ್ಫೋಟವಸ್ತುಗಳನ್ನೂ ಅವು ಪತ್ತೇಮಾಡುವಶಕ್ತಿ ಹೊಂದಿವೆ

ವುಡ್‌ಲ್ಯಾಂಡ್ಸ್ 21-7-72ರಿಂದ ಆಮೋಘ 12ನೇವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ : ರಾಜಶಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಿಗಿನ ಪ್ರದರ್ಶನ : ಪ್ರತಿ ದಿನ 10-30 ದಿ ರೆಕಿಂಗ್ ಕ್ರ್ಯೂ

ಅಪೆರಾ 2 ನೇ ವಾರ

ರವಿ ಪ್ರೊಡಕ್ಷನ್ಸ್‌ರವರ ಈಸ್ಟ್‌ಮ್ಯಾನ್ ಕಲರ್ ತಮಿಳು ಚಿತ್ರ

ಕುರತ್ತಿ ಮಗನ್

ತಾರಾಗಣ — ಜೆಮಿನಿ ಗಣೇಶ್ ಕೆ. ಆರ್. ವಿಜಯ ಎಂ ಎನ್ ನಂಬಿಯಾರ್
ವಿ. ಕೆ. ರಾಮಸ್ವಾಮಿ ಓ ಎ ಕೆ ದೇವರ್

ಚಿತ್ರ ಕಥೆ, ಸಂಭಾಷಣೆ, ನಿರ್ದೇಶನ : ಕೆ. ಎಸ್. ಗೋಪಾಲಕೃಷ್ಣನ್

ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Help The Gorakshana

— Humanitarian Propoganda Monthly ....

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ-ಹೊತ್ತ ಚಿತ್ರ ಸಂದೇಶ್ ರವರ ಜೊಬ್ಬಲು ಚಿತ್ರ

ಆನೆ-ಹುಡುಗ

Quality Printing Neat Binding

Lakshminarasimha Press

Sivarampet, Mysore



Protect the Cow

Edited Printedand Published by Dharmapracharanirata
M S Krishna Rao (Propretor) at the Satvadi Press
Chamarajapuram Mysore